ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1530 (1795)
ಸದಸ್ಯರ ಹೆಸರು : ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 24.03.2020
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿರುವ ಪೌರಾಡಳಿತ ಇಲಾಖೆಯ ಅಡಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಿಗೆ ಬೇರೆ ಇಲಾಖೆಗಳಿಂದ "ಸಿ" ದರ್ಜೆಯ ನೌಕರರು ನಿಯೋಜನೆ ಮೇರೆಗೆ ಬಂದು ಆ ಸಂಸ್ಥೆಗಳ ಮುಖ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಅಂತಹ ನೌಕರರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿ ಹುದ್ದೆಗಳಲ್ಲಿ ಬೇರೆ ಇಲಾಖೆಗಳ ಒಟ್ಟು 06 ಗ್ರೂಪ್ "ಸಿ" ನೌಕರರು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ)	ಈ ನಿಯೋಜನೆ ಎಷ್ಟು ವರ್ಷಗಳ ಅವಧಿಗೆಂದು ಷರತ್ತು ವಿಧಿಸಲಾಗಿದೆ;	ಈ ನಿಯೋಜನೆ ನೇಮಕಾತಿಗಳಿಗೆ ಕಾಲಾವಧಿಯನ್ನು ನಿಗದಿಪಡಿಸಿರುವುದಿಲ್ಲ. ಬದಲಾಗಿ, ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ನೌಕರರುಗಳನ್ನು ಯಾವುದೇ ಸಂದರ್ಭದಲ್ಲಿ ಹಾಗೂ ನೇರ ನೇಮಕಾತಿ/ಮುಂಬಡ್ತಿಯಿಂದ ಇಲಾಖೆಯ ಕೆ.ಎಂ.ಎ.ಎಸ್. ವೃಂದದ ಮುಖ್ಯಾಧಿಕಾರಿಗಳು ಲಭ್ಯವಾದ ಕೂಡಲೇ ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗುವುದು ಎಂದು ಷರತ್ತುಗಳನ್ನು ವಿಧಿಸಲಾಗಿದೆ.
ಇ)	ಈ ಸಂಸ್ಥೆಗಳಲ್ಲಿ ಸುಮಾರು 10 ರಿಂದ 15 ಕೋಟಿ ರೂಪಾಯಿಗಳ ಅನುದಾನವನ್ನು ವ್ಯಯಿಸುವ ಅಧಿಕಾರವಿರುವುದರಿಂದ ಕನಿಷ್ಠ ಪಕ್ಷ ಆ ಸಂಸ್ಥೆಗಳಿಗೆ ದ್ವಿತೀಯ ದರ್ಜೆ ಗುಮಾಸ್ತ, ಆರೋಗ್ಯ ನಿರೀಕ್ಷಕ, ರೆಕಾರ್ಡ್ ಕೀಪರ್ ಇನ್ನು ಮುಂತಾದ ಇದೇ ದರ್ಜೆಯ ನೌಕರರನ್ನು ಮುಖ್ಯಾಧಿಕಾರಿಯಾಗಿ ನೇಮಕ ಮಾಡುವುದು ಸರಿಯಾದ ಕ್ರಮವೇ;	ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿನ ಮುಖ್ಯಾಧಿಕಾರಿಗಳ ಹುದ್ದೆಗೆ ಇಲಾಖೆಯ ಕೆ.ಎಂ.ಎ.ಎಸ್. ಅಧಿಕಾರಿಗಳ ಕೊರತೆಯಿಂದಾಗಿ ಅನ್ಯ ಇಲಾಖೆಯ ನೌಕರರುಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಕೆ.ಎಂ.ಎ.ಎಸ್. ವೃಂದದ ಅಧಿಕಾರಿಗಳನ್ನು ಅವರುಗಳ ಜಾಗಕ್ಕೆ ನೇಮಿಸಿ, ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಕುರಿತು ಪರಿಶೀಲಿಸಲಾಗುವುದು.
ಈ)	ಹಾಗಿದ್ದಲ್ಲಿ, ಈ ಸಂಸ್ಥೆಗಳ ಮುಖ್ಯಾಧಿಕಾರಿಗಳ ಹುದ್ದೆಗೆ ಇಲಾಖೆಯಲ್ಲಿರುವ ಸಹಾಯಕ ನಿರ್ದೇಶಕರು, ಉಪ ತಹಶೀಲ್ದಾರ್ ಅಥವಾ ಇದೇ ವೃಂದದ ಬೇರೆ ಇಲಾಖೆಯವರನ್ನು ನೇಮಕ ಮಾಡಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ?	ಸಹಾಯಕ ನಿರ್ದೇಶಕರು, ಉಪ ತಹಶೀಲ್ದಾರ್ ಅಥವಾ ಇದೇ ವೃಂದದ ಬೇರೆ ಇಲಾಖೆಯವರನ್ನು ಮುಖ್ಯಾಧಿಕಾರಿ ಹುದ್ದೆಗೆ ನೇಮಕ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಸಂಖ್ಯೆ: ನಅಇ 16 ಎಲ್‌ಸಿಕ್ಯೂ 2020

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು.

ಅನುಬಂಧ

ಕ್ರ ಸಂ	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆ ಹೆಸರು	ಮುಖ್ಯಾಧಿಕಾರಿ ಹೆಸರು	ಮಾತೃ ಇಲಾಖೆಯ ಹೆಸರು
1	ಕೋಲಾರ	ಪುರಸಭೆ, ಮಾಲೂರು	ಶ್ರೀ ಎಸ್.ಪ್ರಸಾದ್	ಸಾಂಖ್ಯಿಕ ಇಲಾಖೆ
2	ತುಮಕೂರು	ಪುರಸಭೆ, ಕುಣಿಗಲ್	ಶ್ರೀ ರಮೇಶ್ ಆರ್.	ವೈದ್ಯಕೀಯ ಶಿಕ್ಷಣ
3	ಕೊಡಗು	ಪಟ್ಟಣ ಪಂಚಾಯತಿ, ವಿರಾಜಪೇಟೆ	ಶ್ರೀ ಶ್ರೀಧರ್	ಲೋಕೋಪಯೋಗಿ ಇಲಾಖೆ
4	ಚಿಕ್ಕಮಗಳೂರು	ಪುರಸಭೆ, ಕಡೂರು	ಶ್ರೀ ಹೆಚ್.ಎನ್.ಮಂಜುನಾಥ್	ಕೆ.ಎಸ್.ಎಫ್.ಸಿ.
5	ಉತ್ತರ ಕನ್ನಡ	ಪುರಸಭೆ, ಕುಮಟಾ	ಶ್ರೀ ಸುರೇಶ್.ಎಂ.ಕೆ.	ಉದ್ಯೋಗ ಮತ್ತು ತರಬೇತಿ ಇಲಾಖೆ.
6	ಬಳ್ಳಾರಿ	ಪುರಸಭೆ, ಹರಪನಹಳ್ಳಿ	ಶ್ರೀ ನಾಗರಾಜ ನಾಯ್ಕ.ಬಿ.ಆರ್.	ಯೋಜನೆ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸಂಖ್ಯೆ:ನಅಇ 16 ಎಲ್‌ಸಿಕ್ಯೂ 2020

A.Vijayakumar

(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.